ಅನುಬಂಧ – 1

ರಾಜ್ಯದಲ್ಲಿ ಗಣಿ/ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಗುತ್ತಿಗೆದಾರರ ವಿವರ

ಕ್ರ.ಸಂ.	ಜಿಲ್ಲೆ	ಗಣಿ ಗುತ್ತಿಗೆದಾರರ ಸಂಖ್ಯೆ	ಕಲ್ಲು ಗಣಿ ಗುತ್ತಿಗೆದಾರರು ಸಂಖ್ಯೆ
1.	ಬೆಂಗಳೂರು ಉತ್ತರ	7	853
2.	ಬೆಂಗಳೂರು ದಕ್ಷಿಣ	–	994
3.	ಚಾಮರಾಜನಗರ	–	113
4.	ಚಿಕ್ಕಮಗಳೂರು	4	175
5.	ದಕ್ಷಿಣ ಕನ್ನಡ	23	941
6.	ಹಾಸನ	14	223
7.	ಕನಕಪುರ	2	265
8.	ಕೋಲಾರ	7	331
9.	ಮಂಡ್ಯ	4	328
10.	ಮೈಸೂರು	26	444
11.	ಶಿವಮೊಗ್ಗ	7	292
12.	ತುಮಕೂರು	50	231
13.	ಬೆಳಗಾಂ	39	148
14.	ಬಳ್ಳಾರಿ	9	411
15.	ಬಿಜಾಪುರ	–	138
16.	ಚಿತ್ರದುರ್ಗ	61	117
17.	ಧಾರವಾಡ	25	277
18.	ಗುಲ್ಬರ್ಗಾ	12	207
19.	ಹೊಸಪೇಟೆ	103	157
20.	ಇಳಕಲ್	54	96
21.	ಕೊಪ್ಪಳ	11	162
22.	ಸೇಡಂ	10	257
23.	ಉತ್ತರ ಕನ್ನಡ	36	124
	ಒಟ್ಟು	**504**	**6684**

ರಾಜ್ಯದಲ್ಲಿ ನೇಕಾರರ ಸಂಕಷ್ಟ ಹಾಗೂ ಪರಿಹಾರಗಳು

4642 (5349) : ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ರೇಷ್ಮೆ ಮತ್ತು ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು?

ಆ) ಈ ನೇಕಾರರು ಸಂಕಷ್ಟದಲ್ಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ನೇಕಾರರ ಸಂಕಷ್ಟಗಳನ್ನು ಪರಿಹರಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಈ) ನೇಕಾರರಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಲು ಮತ್ತು ಮನೆ ನಿರ್ಮಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಇದ್ದಲ್ಲಿ ಎಂದಿನಿಂದ ಜಾರಿಗೆ ಬರುವುದು (ವಿವರ ನೀಡುವುದು)

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) 1995–95ರ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ 1,89,934 ಕೈಮಗ್ಗ ನೇಕಾರರು ಹಾಗೂ 69941 ವಿದ್ಯುತ್ ಮಗ್ಗ ನೇಕಾರರು ಇರುತ್ತಾರೆ.

ಆ) ಹೌದು

ಈ) ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ನೇಕಾರರ ಕಲ್ಯಾಣ ಯೋಜನೆ
2. ವಸತಿ–ವ–ಕಾರ್ಯಾಗಾರ ಯೋಜನೆ.
3. ಕಾರ್ಯಾಗಾರ ಯೋಜನೆ
4. ಮಿತವ್ಯಯ ನಿಧಿ ಯೋಜನೆ
5. ಗುಂಪು ವಿಮಾ ಯೋಜನೆ
6. ಆಶಾಜ್ಯೋತಿ ಯೋಜನೆ
7. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಯೋಜನೆ.
8. ಕೈಮಗ್ಗ ನೇಕಾರರ ಸಹಕಾರ ಸಂಘಗಳ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ.
9. ಫೇರ್ಸ್ ಅಂಡ್ ಫೆಸ್ಟಿವಲ್ಸ್ ಯೋಜನೆ.
10. ನೇಕಾರರಿಗೆ ಪ್ರಶಸ್ತಿ ಯೋಜನೆ.
11. ಆರೋಗ್ಯ ಬುತ್ತಿ ಯೋಜನೆ
12. ಪ್ರಾಜೆಕ್ಟ್ ಪ್ಯಾಕೇಜ್ ಯೋಜನೆ.
13. ದೀನ್‌ದಯಾಳ್ ಹತ್‌ಕಾರ್ಗ ಯೋಜನೆ
14. ವಿಶೇಷ ಘಟಕ ಯೋಜನೆ
15. ಗಿರಿಜನ ಉಪ ಯೋಜನೆ
16. ಮಗ್ಗಪೂರ್ವ ಸೌಲಭ್ಯ.
17. ದುರ್ಬಲ ವರ್ಗದವರಿಗೆ ಸೀರೆ, ಪಂಚೆ ಯೋಜನೆ.
18. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ ಯೋಜನೆ
19. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಎನ್‌ಸಿಡಿಸಿ ಯೋಜನೆ

ಈ) ಉ) ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಒದಗಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ. ಆದರೆ ಕೈಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ಮತ್ತು ಅವರ ಮನೆಗಳಿಗೆ ಹೊಂದಿಕೊಂಡಂತೆ ಕಾರ್ಯಾಗಾರಗಳನ್ನು ನಿರ್ಮಿಸಿಕೊಡುವ ಯೋಜನೆಯು ಜಾರಿಯಲ್ಲಿರುತ್ತದೆ.